# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(7ಡಿ)ಪಿ.ಆರ್/ 21 /24-25

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 31-7-24

## ಕಛೇರಿ ಆದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಫ್-'ಸಿ' ವೃಂದದ ಚಾಲಕರ ಸಾಮಾನ್ಯ ವರ್ಗಾವಣೆ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂ.ಎನ್.ಯು 2023, ದಿ: 04-07-2024
2) ಸಂಖ್ಯೆ: ಬಿ12(5)ಪಿ.ಆರ್/112/24-25, ದಿನಾಂಕ: 20-07-2024ರ ಆಂತರಿಕ ಕಛೇರಿ ಟಿಪ್ಪಣಿ
3) ಸಂಖ್ಯೆ: ಬಿ12(5)ಪಿ.ಆರ್/112/24-25, ದಿನಾಂಕ: 20-07-2024ರ ಸುತ್ತೋಲೆ
4) ಮಾನ್ಯ ಮುಖ್ಯ ಆಯುಕ್ತರು ರವರು ಸಂಖ್ಯೆ: ಬಿ12(5)ಪಿ.ಆರ್/112/24-25 ರಲ್ಲಿ ದಿನಾಂಕ: 22-07-2024ರಂದು ಹೊರಡಿಸಿರುವ ಮಾರ್ಗಸೂಚಿಗಳು
5) ಸಂಖ್ಯೆ: ಬಿ12(5)ಪಿ.ಆರ್/112/24-25, ದಿನಾಂಕ: 26-07-2024ರ ಕಛೇರಿ ಆದೇಶ
6) ದಿನಾಂಕ: 29-07-2024ರಂದು ಸ್ಥಳ ಆಯ್ಕೆ ಸಂಬಂಧ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆ.

-----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(1)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದನುಸಾರ 10 ವರ್ಷಗಳಿಗೂ ಮಿಗಿಲಾಗಿ ಒಂದೇ ವಲಯದಲ್ಲಿ ಕಾರ್ಯನಿರ್ವಹಿಸಿರುವ ಗ್ರೂಫ್-'ಸಿ' ವೃಂದದ ಚಾಲಕರು ಬೇರೆ ವಲಯಕ್ಕೆ ವರ್ಗಾವಣೆ ಮಾಡುವ ಸಂಬಂಧ ಉಲ್ಲೇಖ-(6)ರಂತೆ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಕೆಳಕಂಡ ಚಾಲಕರು ರವರುಗಳು ಆಯ್ಕೆ ಮಾಡಿರುವಂತೆ ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸಲು ವರ್ಗಾಯಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿಕೊಂಡಿರುವಂತೆ ವರ್ಗಾಯಿಸಿ ನೇಮಿಸಿರುವ ಸ್ಥಳ |
|---|---|---|---|
| 1) | ವೈ.ಕೆ.ಜಗದೀಶ್ | ಉಪ ನಿಯಂತ್ರಕರು (ಹಣಕಾಸು ಮಹಾದೇವಪುರ) | ಉಪ ನಿಯಂತ್ರಕರು (ಹಣಕಾಸು-ದಾಸರಹಳ್ಳಿ) ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶ್ರೀನಿವಾಸ, ಚಾಲಕರು, ರವರ ವರ್ಗಾವಣೆಯಿಂದ ತೆರವಾಗುತ್ತಿರುವ ಸ್ಥಳಕ್ಕೆ |
| 2) | ಶ್ರೀನಿವಾಸ ಎಮ್.ಜಿ | ಉಪ ನಿಯಂತ್ರಕರು (ಹಣಕಾಸು-ದಾಸರಹಳ್ಳಿ) | ಜಂಟಿ ಆಯುಕ್ತರು (ಮಹದೇವಪುರ) ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಿ. ಶಿವರಾಜ, ಚಾಲಕರು, ರವರ ವರ್ಗಾವಣೆಯಿಂದ ತೆರವಾಗುತ್ತಿರುವ ಸ್ಥಳಕ್ಕೆ |
| 3) | ನಾಗಪ್ಪ ಬಿ | ಉಪ ನಿಯಂತ್ರಕರು (ಹಣಕಾಸು-ದಾಸರಹಳ್ಳಿ) | ಉಪ ನಿಯಂತ್ರಕರು (ಹಣಕಾಸು-ಮಹದೇವಪುರ) ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೈ.ಕೆ.ಜಗದೀಶ್, ಚಾಲಕರು ರವರ ವರ್ಗಾವಣೆಯಿಂದ ತೆರವಾಗುತ್ತಿರುವ ಸ್ಥಳಕ್ಕೆ |
| 4) | ಜಿ. ಶಿವರಾಜ | ಜಂಟಿ ಆಯುಕ್ತರು (ಮಹದೇವಪುರ) | ಉಪ ನಿಯಂತ್ರಕರು (ಹಣಕಾಸು-ದಾಸರಹಳ್ಳಿ) ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ನಾಗಪ್ಪ ಬಿ, ಚಾಲಕರು ರವರ |

| | | | |
|---|---|---|---|
| | | | ವರ್ಗಾವಣೆಯಿಂದ ತೆರವಾಗುತ್ತಿರುವ ಸ್ಥಳಕ್ಕೆ |
| 5) | ಕೆ.ಎಮ್ ಪ್ರಸಾದ | ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ಮಹದೇವಪುರ | ಉಪ ನಿಯಂತ್ರಕರು (ಹಣಕಾಸು-ದಾಸರಹಳ್ಳಿ) ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಯರಾಮ್ ರಾವ್, ಚಾಲಕರು ರವರ ವರ್ಗಾವಣೆಯಿಂದ ತೆರವಾಗುತ್ತಿರುವ ಸ್ಥಳಕ್ಕೆ |

ಮುಂದುವರೆದಂತೆ, ಕೌನ್ಸಿಲಿಂಗ್ ಪ್ರಕ್ರಿಯೆಗೆ ಈ ಕೆಳಕಂಡ ಒಬ್ಬ ಚಾಲಕರು ಗೈರುಹಾಜರಿಯಾಗಿದ್ದು, ಮಾರ್ಗಸೂಚಿಗಳನ್ವಯ ಲಾಟರಿ ಪ್ರಕ್ರಿಯೆ ಮೂಲಕ ಇವರುಗಳಿಗೆ ಸ್ಥಳ ಆಯ್ಕೆ ಮಾಡಿ, ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ವರ್ಗಾಯಿಸಬೇಕಾಗಿದ್ದು ಆದರೆ ಸದರಿ ಪ್ರಕ್ರಿಯೆಯಲ್ಲಿ ಒಬ್ಬ ಚಾಲಕರು ಮಾತ್ರ ಗೈರು ಹಾಜರಾಗಿದ್ದು ಒಂದು ಸ್ಥಳ ಮಾತ್ರ ಖಾಲಿ ಇರುತ್ತದೆ ಆದ್ದರಿಂದ ಸದರಿ ಸ್ಥಳವನ್ನು ಗೈರುಹಾಜರಾಗಿದ್ದ ಈ ಕೆಳಕಂಡ ಚಾಲಕರಿಗೆ ಆಯ್ಕೆ ಮಾಡಿ ವರ್ಗಾಯಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಖಾಲಿ ಇರುವ ಒಂದು ಸ್ಥಳ |
|---|---|---|---|
| 1. | ಜಯರಾಮ್ ರಾವ್ | ಉಪ ನಿಯಂತ್ರಕರು (ಹಣಕಾಸು-ದಾಸರಹಳ್ಳಿ) | ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ಮಹದೇವಪುರ ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ.ಎಮ್ ಪ್ರಸಾದ, ಚಾಲಕರು ರವರ ವರ್ಗಾವಣೆಯಿಂದ ತೆರವಾಗುತ್ತಿರುವ ಸ್ಥಳಕ್ಕೆ |

ಮೇಲ್ಕಂಡ ಆದೇಶದನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು / ಇಲಾಖಾ ಮುಖ್ಯಸ್ಥರುಗಳು ವರ್ಗಾವಣೆಗೊಂಡ ನೌಕರುಗಳು ವರ್ಗಾಯಿಸಲಾಗಿರುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

ಮೇಲ್ಕಂಡ ಆದೇಶವು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

**ಷರತ್ತುಗಳು:-**

1. ಸಾಮಾನ್ಯ ವರ್ಗಾವಣೆಗೊಂಡಿರುವ ನೌಕರರು ಬೇರೆ ಸ್ಥಳಕ್ಕೆ ವರ್ಗಾವಣೆ ಕೋರುವಂತಿಲ್ಲ ಹಾಗೂ ಈ ಆದೇಶವನ್ನು ಪಾಲಿಸದ ಸಂಬಂಧಪಟ್ಟ ಚಾಲಕರು ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
2. ವರ್ಗಾವಣೆ ಪ್ರಕ್ರಿಯೆ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು / ದೂರುಗಳು ಸ್ವೀಕೃತಿಯಾದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಷರತ್ತಿಗೊಳಪಡಿಸಿದೆ.
3. ಸದರಿ ವರ್ಗಾವಣೆ ಆದೇಶದಲ್ಲಿ ವರ್ಗಾವಣೆಗೊಂಡಿರುವ ನೌಕರರುಗಳು ವರ್ಗಾವಣೆಗೊಂಡ ಸ್ಥಳಗಳಿಗೆ ವರದಿ ಮಾಡಿಕೊಳ್ಳುವ ಬಗ್ಗೆ ವಲಯ ಆಯುಕ್ತರು / ಜಂಟಿ ಆಯುಕ್ತರುಗಳು / ಇಲಾಖಾ ಮುಖ್ಯಸ್ಥರುಗಳು ಅಗತ್ಯ ಕ್ರಮ ಕೈಗೊಳ್ಳುವುದು.

31.7.24

ಮಾನ್ಯ ಮುಖ್ಯ ಆಯುಕ್ತರು ರವರ
ಆದೇಶದ ಮೇರೆಗೆ)

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಎಲ್ಲಾ ವಲಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ಎಲ್ಲಾ ವಲಯ ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಪ್ರಧಾನ ಅಭಿಯಂತರರು ರವರಿಗೆ ಕಳುಹಿಸಿದೆ.
: ಎಲ್ಲಾ ಮುಖ್ಯ ಅಭಿಯಂತರರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ಜಂಟಿ ನಿರ್ದೇಶಕರು (ನಗರಯೋಜನೆ) / ಸ.ನಿ (ನ.ಯೋ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ಸ.ಕಾ.ನಿ.ಅ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ಉಪ ನಿಯಂತ್ರಕರು ಹನಕಾಸು ರವರಿಗೆ ಕಳುಹಿಸಿದೆ
: ಕಛೇರಿ ಪ್ರತಿ.